ತಡೆಯಾಜ್ಞೆಯನ್ನು ತೆರವುಗೊಳಿಸಿ ಜಾಗವನ್ನು ಪೊಲೀಸ್ ಠಾಣೆಗೆ ಉಪಯೋಗಿಸಿಕೊಳ್ಳುವುದಕ್ಕೆ ಈಗಲಾದರೂ ಪ್ರಯತ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್:- ಆ ಕುರಿತು ಪ್ರಯತ್ನಿಸುತ್ತೇವೆ.

ವಿಷಯ:- ಹುಣಸೂರಿನ ಸಣ್ಣ ನೀರಾವರಿ ಕಾರ್ಯಾಲಯ ಸ್ಥಳಾಂತರದಿಂದ ಉದ್ಭವಿಸಿದ ಸ್ಥಿತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 194 (1139)

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಣಸೂರಿನಲ್ಲಿರುವ ಸಣ್ಣ ನೀರಾವರಿ ಕಾರ್ಯಾಲಯವನ್ನು ಪಕ್ಕದ ಕ್ಷೇತ್ರವಾದ ಹೆಚ್.ಡಿ.ಕೋಟೆಗೆ ಸ್ಥಳಾಂತರಗೊಳಿಸಲು ಸರ್ಕಾರದವರ ಗಮನದಲ್ಲಿರುವುದು ನಿಜವೇ?

ಆ) ಸದರಿ ತೀರ್ಮಾನದಿಂದ ಪರಿಶೀಲನೆಯ ನಲವತ್ತು ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದ ಹುಣಸೂರು ಕ್ಷೇತ್ರದಿಂದ ಕೇವಲ ಮೂರು ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಪ್ರದೇಶ ಹೊಂದಿದ ಹೆಚ್.ಡಿ.ಕೋಟೆಗೆ ಕಾರ್ಯಾಲಯ ವರ್ಗಾಯಿಸುವುದರಿಂದ ಹುಣಸೂರು ಕ್ಷೇತ್ರದ ಆಡಳಿತ ಮತ್ತು ಉಸ್ತುವಾರಿ ಹದಗೆಟ್ಟು ರೈತರು ವಿಶೇಷ ತೊಂದರೆಗೆ ಒಳಗಾಗುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಈ ವಿಷಯದಲ್ಲಿ ಕೈಗೊಳ್ಳುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹುಣಸೂರಿನಲ್ಲಿ ಸಣ್ಣ ನೀರಾವರಿ ಉಪವಿಭಾಗ ಇರುವುದಿಲ್ಲ. ಲೋಕೋಪಯೋಗಿ ಇಲಾಖೆಯು ತನ್ನ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 50 ಪಿಸಿಒ 93 ದಿನಾಂಕ 23-5-96ರಲ್ಲಿ ಹೆಚ್.ಡಿ.ಕೋಟೆ ಉಪವಿಭಾಗವನ್ನಾಗಿ ಪರಿವರ್ತಿಸಿದ ನಂತರ, ಈ ಉಪವಿಭಾಗವನ್ನು ಅದೇ ಸ್ಥಳದಲ್ಲೇ ಅಂದರೆ ಹೆಚ್.ಡಿ.ಕೋಟೆಯಲ್ಲಿಯೇ ಮುಂದುವರೆಸಲು ಆದೇಶ ಸಂಖ್ಯೆ: ನೀಇ 59 ಸನೀರಾ 95 ದಿನಾಂಕ: 29-5-96ರಂದು ನೀರಾವರಿ ಇಲಾಖೆಯು ಆದೇಶ ಹೊರಡಿಸಿದೆ. ಆದರೆ ನಂತರ ಲೋಕೋಪಯೋಗಿ ಇಲಾಖೆಯು ತನ್ನ ದಿನಾಂ : 23.5.96ರ ಆದೇಶವನ್ನು ತಡೆ ಹಿಡಿದಿದೆ. ಹೆಚ್.ಡಿ.ಕೋಟೆ ಉಪವಿಭಾಗಕ್ಕೆ ಹೆಚ್.ಡಿ.ಕೋಟೆ ತಾಲ್ಲೂಕಿನ ಮತ್ತು ಹುಣಸೂರು ತಾಲ್ಲೂಕಿನ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆ ಕೆಲಸಗಳನ್ನು ವಹಿಸಲು ಆದೇಶಿಸಲಾಗಿದೆ.

ಆ ಮತ್ತು ಇ) ನಿಜವಲ್ಲ. ಹೆಚ್.ಡಿ.ಕೋಟೆಯಲ್ಲಿ ಸಣ್ಣ ನೀರಾವರಿ ಉಪ ವಿಭಾಗದ ಕೇಂದ್ರದ ಸ್ಥಾನ ನಿಗದಿಪಡಿಸಿದ್ದರೂ ಸಹ, ಹುಣಸೂರು ತಾಲ್ಲೂಕಿನ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳನ್ನು ಈ ಉಪವಿಭಾಗವೇ ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

ಶ್ರೀ ಸಿ.ಹೆಚ್. ವಿಜಯಶಂಕರ್:- ಮಾನ್ಯ ಅಧ್ಯಕ್ಷರೆ, ಹುಣಸೂರಿನಲ್ಲಿರುವ ಸಣ್ಣ ನೀರಾವರಿ ಕಾರ್ಯಾಲಯವನ್ನು ಪಕ್ಕದಕ್ಷೇತ್ರವಾದ ಹೆಚ್.ಡಿ.ಕೋಟೆಗೆ ಸ್ಥಳಾಂತರಿಸಲಾಗಿದೇ ಎಂದು ಕೇಳಿರುವುದಕ್ಕೆ ಹೌದು ಎಂದು ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಆದರೆ ಹುಣಸೂರಿನಲ್ಲಿರುವ ಸಣ್ಣ ನೀರಾವರಿ ಕಾರ್ಯಾಲಯವನ್ನು ಹೆಚ್.ಡಿ.ಕೋಟೆಗೆ ಸ್ಥಳಾಂತರಿಸುವುದಕ್ಕೆ ತಾವು ಉಪಯೋಗಿಸಿದ ಮಾನದಂಡ ಯಾವುದು? ಎರಡನೆಯದಾಗಿ ಪಕ್ಕದ ಕ್ಷೇತ್ರವಾದ ಹೆಚ್ಡಿ.ಕೋಟೆಗೆ ಕಾರ್ಯಾಲಯವನ್ನು ಸರ್ಕಾರ ಸ್ಥಳಾಂತರಿಸಿದರೂ ಕೂಡ ರೈತರಿಗೆ ತೊಂದರೆಯಾಗದಂತೆ ಮತ್ತು ಆಡಳಿತದ ದೃಷ್ಟಿಯಿಂದ ಸಂಪೂರ್ಣ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ ಆದುದರಿಂದ, ಯಾವ ರೀತಿಯಾದ ವ್ಯವಸ್ಥೆಯನ್ನು ಮಾಡಿಕೊಡುತ್ತೀರಿ? ಮೂರನೆಯದಾಗಿ, ಈ ಬಗ್ಗೆ ಸರ್ಕಾರದವರು ಸದರಿ ವಿಷಯದಲ್ಲಿ ಕೈಗೊಳ್ಳುವ ಕ್ರಮಗಳೇನು? ರೈತರಿಗೆ ಯಾವ ರೀತಿಯ ವ್ಯವಸ್ಥೆ ಮಾಡಿ ಕೊಡಲಾಗುವುದು? ಎಂದು ಕೇಳಿರುವ ಪ್ರಶ್ನೆಗೆ ಉತ್ತರ ದೊರಕಿಲ್ಲ. ಇವೆಲ್ಲಕಿಂತ ಮುಖ್ಯವಾಗಿ ಹುಣಸೂರಿನಲ್ಲಿರುವ ಸಣ್ಣ ನೀರಾವರಿ ಕಾರ್ಯಾಲಯವನ್ನು ಹೆಚ್.ಡಿ.ಕೋಟೆಗೆ ಸ್ಥಳಾಂತರಿಸಿದ ಸಂದರ್ಭದಲ್ಲಿ ನಮ್ಮಲ್ಲಿರುವ ರೈತರಿಗೆ ಯಾವ ರೀತಿಯ ವ್ಯವಸ್ಥೆ, ಅನುಕೂಲ ಮಾಡಿಕೊಡಲಾಗುತ್ತದೆ? ಹಾಗೂ ಸ್ಥಳಾಂತರಿಸುವುದಕ್ಕೆ ಉಪಯೋಗಿಸಿದ ಮಾನದಂಡ ಯಾವುದು? ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಉತ್ತರಿಸುವುದಾದರೆ, ಸಣ್ಣ ನೀರಾವರಿ ಇಲಾಖೆ ತಾಲ್ಲೂಕು ಮಟ್ಟದಲ್ಲಿ ಇದುವರೆವಿಗೂ ಲೋಕೋಪಯೋಗಿ ಇಲಾಖೆಯೊಂದಿಗೆ ಕಾರ್ಯ ನಿರ್ವಹಿಸುತ್ತಿತ್ತು. ಇದರಿಂದ ಸಣ್ಣ ನೀರಾವರಿಯ ಕಾರ್ಯ ಸಮರ್ಪಕವಾಗಿ ಆಗುತ್ತಿಲ್ಲವೆಂದು ತಿಳಿದು ದೂರದೃಷ್ಟಿಯಿಂದ ಸಣ್ಣ ನೀರಾವರಿಯನ್ನು ಪ್ರತ್ಯೇಕಗೊಳಿಸಿ ಕಾರ್ಯನಿರ್ವಹಣೆ ರೂಪಕ್ಕೆ ತರಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಲಾಗಿದೆ. ಆದರೆ, ಲೋಕೋಪಯೋಗಿ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಯನ್ನು ಪ್ರತ್ಯೇಕಗೊಳಿಸದೆ ಸಧ್ಯಕ್ಕೆ ತಡೆಹಿಡಿಯಬೇಕೆಂದು ದಿನಾಂಕ 23.5.1996ರಂದು ತಡೆಯಾಜ್ಞೆ ಬಂದಿರುವುದರಿಂದ, ಇದರ ಬಗ್ಗೆ ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚಿಸಿದ್ದು ಪೂರ್ಣ ಸಮಾಲೋಚನೆಯಾದ ನಂತರ ತೆಗೆದುಕೊಂಡ ತೀರ್ಮಾನದ ಸಂಪೂರ್ಣ ಮಾಹಿತಿಯನ್ನು ನಾವು ಸದಸ್ಯರಿಗೆ ಒದಗಿಸಿ ಕೊಡುತ್ತೇವೆ. ಸಣ್ಣ ನೀರಾವರಿ ಕಾರ್ಯಾಲಯವನ್ನು ಬೇರೆಡೆಗೆ ಸ್ಥಳಾಂತರಿಸುವುದಕ್ಕೆ ಉಪಯೋಗಿಸುವ ಮಾನದಂಡವೇನು? ಎಂದು ಕೇಳಿರುವುಕ್ಕೆ ಸಣ್ಣ

ನೀರಾವರಿಗೆ ಸಂಬಂಧಿಸಿದ ಕಾಮಗಾರಿಗಳು ಯಾವ ತಾಲ್ಲೂಕಿನಲ್ಲಿ ಜಾಸ್ತಿ ಇರುತ್ತದೋ, ಆ ತಾಲ್ಲೂಕಿಗೆ ಒಂದು ಕಛೇರಿಯನ್ನು ಕೊಡಬೇಕಂದು ನಾವು ಮಾನದಂಡವನ್ನು ಇಟ್ಟುಕೊಂಡಿದ್ದೇವೆ. ಇದರಲ್ಲೇನಾದರೂ ಲೋಪ-ದೋಷಗಳಾಗಿದ್ದರೆ, ಸಣ್ಣ ನೀರಾವರಿ ಉಪ ವಿಭಾಗಗಳನ್ನು ಪ್ರತ್ಯೇಕಗೊಳಿಸಬೇಕೆಂದು ಆದೇಶ ಬಂದ ನಂತರ ಏನಾದರೂ... ನಾನು ಮಾನ್ಯ ಸದಸ್ಯರ ಭಾವನೆಯನ್ನು ಅರಿತು, ಯಾವ ತಾಲ್ಲೂಕಿನಲ್ಲಿ ಸಣ್ಣನೀರಾವರಿಗೆ ಸಂಬಂಧಿಸಿದ ಕಾಮಗಾರಿಗಳು ಜಾಸ್ತಿ ಇರುತ್ತದೋ ಅಂತಹ ತಾಲ್ಲೂಕಿಗೆ ಸಣ್ಣ ನೀರಾವರಿ ಉಪ ವಿಭಾಗ ಕಾರ್ಯಾಲಯವನ್ನು ತೆರೆಯಬೇಕೆಂದು ಆದೇಶ ಕೊಡುತ್ತೇನೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಸಣ್ಣ ನೀರಾವರಿ ಸಚಿವರು ಉತ್ತರಿಸುತ್ತಾ ಅತ್ಯಂತ ಹೆಚ್ಚು ಅಚ್ಚುಕಟ್ಟು ಪ್ರದೇಶ ಎಲ್ಲಿದೆಯೋ ಅಲ್ಲಿ ಸಣ್ಣ ನೀರಾವರಿಗೆ ವ್ಯವಸ್ಥೆ ಮಾಡಲು ಅಲ್ಲಿಯೇ ಕಾರ್ಯಾಲಯವನ್ನು ಉಳಿಸುವಂಥ ಅಥವಾ ಸ್ಥಳಾಂತರಿಸುವ ಕೆಲಸ ಮಾಡುತ್ತೇವೆಂದರು. ಇಡೀ ಮೈಸೂರು ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚು ಸಣ್ಣ ನೀರಾವರಿ ಪ್ರದೇಶ ಹೊಂದಿರುವುದು ಯಾವುದೆಂದರೆ ಹುಣಸೂರು ತಾಲ್ಲೂಕು. ಅಲ್ಲಿ ಸುಮಾರು ನಲವತ್ತು ಸಾವಿರ ಎಕರೆಗಳು ಅಚ್ಚುಕಟ್ಟಿಗೆ ಒಳಪಟ್ಟಂಥ ಪ್ರದೇಶವಾಗಿದ್ದು ಪಕ್ಕದ ಹೆಚ್.ಡಿ.ಕೋಟೆಯಲ್ಲಿ ಕೇವಲ ಮೂರು ಸಾವಿರ ಎಕರೆಗಳಷ್ಟು ಅಚ್ಚುಕಟ್ಟು ಒಳ ಪಟ್ಟಂಥ ಪ್ರದೇಶವಾಗಿರುವುದರಿಂದ ಹುಣಸೂರಿನಲ್ಲಿದ್ದ ಸಣ್ಣ ನೀರಾವರಿ ಕಾರ್ಯಾಲಯವನ್ನು ಪಕ್ಕದ ಹೆಚ್.ಡಿ.ಕೋಟೆಗೆ ಸ್ಥಳಾಂತರಿಸುವುದಕ್ಕೆ ತಾವು ಯಾವ ಮಾನದಂಡವನ್ನು ಉಪಯೋಗಿಸಿದ್ದೀರಿ? ಎಂದು ಕೇಳಿದ್ದಕ್ಕೆ ತಮ್ಮಿಂದ ವ್ಯತಿರಿಕ್ತವಾದ ಅಭಿಪ್ರಾಯ ಬಂತು ಎನ್ನುವುದು ಸ್ಪಷ್ಟವಾಯಿತು ಎರಡನೆಯದಾಗಿ, ಬಹಳ ಮಹತ್ವವಾದುದೇನೆಂದರೆ, ರೈತರುಗಳ ಅನುಕೂಲಕ್ಕೋಸ್ಕರ ಸುಮಾರು ಅರ್ಧ ಶತಮಾನದಿಂದಲೂ ಕಾರ್ಯನಿರ್ವಹಿಸುತ್ತಿದ್ದ ಕಛೇರಿಯನ್ನು ಸ್ಥಳಾಂತರಿಸುವ ಸಮಯದಲ್ಲಿ ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದಿರುವುದಿಲ್ಲ. ತದನಂತರ ಇದರ ಬಗ್ಗೆ ಯಾವ ರೀತಿಯ ವ್ಯವಸ್ಥೆ ಮಾಡಬೇಕೆಂದೂ ಸಹ ಸ್ಪಷ್ಟವಾಗಿ ಗೊತ್ತಿರುವುದಿಲ್ಲ. ಸರ್ಕಾರ ಈ ರೀತಿ ಏಕಾಏಕಿ ತೆಗೆದುಕೊಳ್ಳುವ ತೀರ್ಮಾನದಿಂದ ಜನಪ್ರತಿನಿಧಿಗಳಾದ ನಮಗೆ ಬಹಳ ಕಸಿವಿಸಿಯ ವಾತಾವರಣವುಂಟಾಗುತ್ತದೆ. ನಮ್ಮ ಗಮನಕ್ಕೆ ತಾರದೇ ಸರ್ಕಾರ ಈ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳಬಾರದು ಎರಡನೆಯದಾಗಿ, ಅತ್ಯಂತ ಹೆಚ್ಚು ಅಚ್ಚುಕಟ್ಟಿಗೆ ಒಳಪಟ್ಟಿರುವ ಪ್ರದೇಶ ನಮ್ಮಲ್ಲಿರುವುದರಿಂದ ಸದರಿ ಕಾರ್ಯಾಲಯವನ್ನು ನಮ್ಮಲ್ಲಿಯೇ ಮುಂದುವರೆಸಬೇಕು .ಮೂರನೆಯದಾಗಿ, ಕಾರ್ಯಾಲಯವನ್ನು ಸ್ಥಳಾಂತರಿಸಲು ತಾವು ಯಾವುದೇ ಮಾನದಂಡವನ್ನು ಉಪಯೋಗಿಸಿದರೂ ಕೂಡ ಸಣ್ಣ ನೀರಾವರಿ ಕಛೇರಿಯನ್ನೆ ಹುಣಸೂರಿನಿಂದ ಬೇರೆಡೆಗೆ ಸ್ಥಳಾಂತರಿಸುವುದಕ್ಕೆ ಸಾಧ್ಯವೇ ಇಲ್ಲವೆನ್ನುವಂಥ ಎಲ್ಲಾ ರೀತಿಯ ಮಾಹಿತಿ ತಮ್ಮ ಇಲಾಖೆಯಲ್ಲೇ ಲಭ್ಯವಾಗುತ್ತದಾದ್ದರಿಂದ ಹುಣಸೂರಿನಲ್ಲಿಯೆ ಸಣ್ಣ ನೀರಾವರಿ ಕಾರ್ಯಾಲಯವನ್ನು ಮುಂದುವರೆಸುವುದಕ್ಕೆ ಮಾನ್ಯ ಸಚಿವರು ಎಲ್ಲಾ ರೀತಿಯ

ಕ್ರಮಗಳನ್ನು ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀತಿಪ್ಪೇಸ್ವಾಮಿ:- ಈಗ ಸಧ್ಯಕ್ಕೆ ತಡೆಯಾಜ್ಞೆ ಇರುವುದರಿಂದ ತಡೆಯಾಜ್ಞೆ ವಿಮುಕ್ತಿಯಾದ ತಕ್ಷಣ ಸನ್ಮಾನ್ಯ ಸದಸ್ಯರ ಭಾವನೆ ಏನಿದೆ, ಅದು ಸಮಂಜಸವಾಗಿರುವುದರಿಂದ ನಾನು ಅದಕ್ಕೆ ಸ್ಪಂದಿಸುತ್ತೇನೆಂದು ಹೇಳಲು ಇಚ್ಚಿಪಡುತ್ತೇನೆ.

ಶ್ರೀಬಿ.ಎಸ್. ಯಡಿಯೂರಪ್ಪ:- ಶಿಕಾರಿಪುರದಪಲ್ಲಿ ಸಣ್ಣ ನೀರಾವರಿ ಇಲಾಖೆಯಿದ್ದು ಅಲ್ಲಿನ ಅಂಜನಾಪುರದಲ್ಲಿ ಎರಡು ದೊಡ್ಡ ಜಲಾಶಯಗಳಿದ್ದು, ಅಲ್ಲಿನ ನೀರಾವರಿ ಇಲಾಖೆಯನ್ನು ಹೊಸ ನಗರಕ್ಕೆ ಈಗ ಸ್ಥಳಾಂತರಿಸುತ್ತಿರುವುದರಿಂದ, ಹೊಸನಗರದಲ್ಲಿ ಏನೂ ಇಲ್ಲ. ಸೊರಬ ಮತ್ತು ಶಿಕಾರಿಪುರದಲ್ಲೇ ಸಣ್ಣ ನೀರಾವರಿ ಇಲಾಖೆಯನ್ನು ಉಳಿಸದಿದ್ದರೆ ಬಹುಶಃ ಅಲ್ಲಿ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ ಅಲ್ಲದೆ, ಪಕ್ಕದ ಕ್ಷೇತ್ರದಲ್ಲಿ ಜಿಲ್ಲಾ ಮಂತ್ರಿಗಳಾದ ಶ್ರೀ ಬಸವಣ್ಣನವರಿರುವುದರಿಂದ ತಕ್ಷಣವೇ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ.

ಶ್ರೀ ತಿಪ್ಪೇಸ್ವಾಮಿ:- ಆ ಕುರಿತು ಗಮನಿಸುತ್ತೇನೆ.

ಡಾ:ಎ.ಬಿ.ಮಲಕರೆಡ್ಡಿ:- ಮಾನ್ಯ ಸಚಿವರು ಉತ್ತರ ಕೊಡುತ್ತಾ, ಸಣ್ಣ ನೀರಾವರಿಯನ್ನು ಮೊದಲು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದರಿಂದ, ಸಣ್ಣ ನೀರಾವರಿಗೆ ಸಂಬಂಧಿಸಿದ ಕಾಮಗಾರಿ ಸಮರ್ಪಕವಾಗಿ ಆಗುತ್ತಿಲ್ಲದಿರುವುದನ್ನು ಕಂಡು ಸಣ್ಣ ನೀರಾವರಿ ಇಲಾಖೆಯನ್ನು ಪ್ರತ್ಯೇಕಗೊಳಿಸಿ ಕಾರ್ಯಾಲಯವನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಉಪ ವಿಭಾಗದ ಮಟ್ಟದಲ್ಲಿ ತೆರೆಯಲಾಗಿದೆ ಎಂದರು.

12. 10 ಪಿ.ಎಂ.

ಈ ವ್ಯವಸ್ಥೆಯನ್ನು ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ವಿಸ್ತರಿಸಿದ್ದೀರೋ? ಅಥವಾ ಕೆಲವೇ ಜಿಲ್ಲೆ, ತಾಲ್ಲೂಕುಗಳಿಗೆ ಮಾಡಿದ್ದೀರೋ? ಹಾಗಿದ್ದರೆ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೆ, ಹಿಂದೆ ಇದರ ಬಗ್ಗೆ ವಿಮರ್ಶೆ ಮಾಡಿ ತೀರ್ಮಾನ ಮಾಡಿದಂಥ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ 59 ಉಪವಿಭಾಗಗಳಾಗಿ ಸಧ್ಯಕ್ಕೆ ಬೇರೆ ಮಾಡಿದ್ದಾರೆ. ಈಗ ಮಾಡಿರುವುದು ಸಾಕಾಗುವುದಿಲ್ಲ ಎಲ್ಲಾ ಕಡೆಗಳಲ್ಲೂ ಇದನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಸಣ್ಣ ನೀರಾವರಿಯಲ್ಲಿ ಕೆಲಸ ಮಾಡಬೇಕೆಂದರೆ, ಎರಡು ಮೂರು ವಿಭಾಗಗಳನ್ನು ಸೇರಿಸಿ ಒಂದು ಉಪವಿಭಾಗ ಮಾಡುವುದರಿಂದ ನಮಗೆ ಅಧಿಕಾರ ಸಿಕ್ಕುವುದಿಲ್ಲ, ನಮ್ಮ ಕ್ಷೇತ್ರದಲ್ಲಿ ಕೆಲಸವಾಗುವುದಿಲ್ಲವೆನ್ನತಕ್ಕ ಸತ್ಯವಾದ ಕಳಕಳಿ ಸದಸ್ಯರುಗಳಲ್ಲಿದೆ. ನಾವು ಸದಸ್ಯರುಗಳ ಭಾವನೆಯನ್ನು ಅರಿತು, ಅವರ ಭಾವನೆಗೆ ಕುಂದು ತರದಂತೆ ಸಮರ್ಪಕವಾದ

ರೀತಿಯಲ್ಲಿ ಕೆಲಸವು ಆಗುವ ರೀತಿಯಲ್ಲಿ ಸಮಗ್ರವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ತಿಳಿಯಬಯಸುತ್ತೇನೆ.

ಡಾ: ಹೆಚ್.ಸಿ.ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿಜಯಶಂಕರ್‌ರವರೇನು ಹೇಳಿದ್ದಾರೆ ಅದೇ ರೀತಿ ನನ್ನ ಕ್ಷೇತ್ರದಲ್ಲೂ ಆಗಿದೆ. ಸಣ್ಣ ನೀರಾವರಿಯ ಹೆಚ್ಚಿನ ಕೆಲಸವು ಆಗುತ್ತಿರುವುದು ನನ್ನ ಮಾಗಡಿ ಕ್ಷೇತ್ರದಲ್ಲಿ. ಆದರೆ ತಾವು ನಮ್ಮಲ್ಲಿರುವ ಸಣ್ಣ ನೀರಾವರಿ ಕಛೇರಿಯನ್ನು ನೆಲಮಂಗಲಕ್ಕೆ ವರ್ಗ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ನೆಲಮಂಗಲದಲ್ಲಿ ಬಹುಶ: ಸಣ್ಣನೀರಾವರಿ ಕೆಲಸಗಳು ಬಹಳ ಕಡಿಮೆ ಇದೆ. ಆದ್ದರಿಂದ ದಯಮಾಡಿ ಆ ಕಛೇರಿಯನ್ನು ನನ್ನ ಕ್ಷೇತ್ರವಾದ ಮಾಗಡಿಯಲ್ಲಿಯೇ ಮುಂದುವರೆಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವಿಷಯ:- ಬೆಂಗಳೂರು ನಗರದಲ್ಲಿ ಖಾಸಗಿ ಬಸ್ಸುಗಳ ನಿಲ್ದಾಣದ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 516

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿ ನಗರ):- 23-7-96 ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರಕ್ಕೆ ಬರುವ ಹಾಗೂ ಇಲ್ಲಿಂದ ಹೋಗುವ ಖಾಸಗಿ ಬಸ್ಸುಗಳ ನಿಲ್ದಾಣವನ್ನು ಮಿನರ್ವ ಮಿಲ್ ಮೈದಾನದಲ್ಲಿ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):-

ಅ) ಹೌದು.

ಆ) ಮಿನರ್ವಮಿಲ್ ಮೈದಾನದಲ್ಲಿ ಖಾಸಗಿ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲು ತೀರ್ಮಾನಿಸಿದ್ದು, ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಗಳನ್ನು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೋರಲಾಗಿತ್ತು. ಆದರೆ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದಿಂದ ಮಿಲ್‌ನ ಅಧಿಕಾರಿಗಳು ತಡೆಯಾಜ್ಞೆ ತಂದಿರುತ್ತಾರೆ. ಆದುದರಿಂದ ಈ ಪ್ರಸ್ತಾವವನ್ನು ಕೈಬಿಡಲಾಯಿತು. ಬಿನ್ನಿ ಮಿಲ್ ಕೆರೆ ಏರಿಯ ಮುಂಭಾಗದಲ್ಲಿರುವ ಜಮೀನನ್ನು ಕಾಂಟ್ರಾಕ್ಟ್ ಕ್ಯಾರೇಜ್‌ಗಳಿಗೆ ಉಪಯೋಗಿಸಿಕೊಳ್ಳಲು ತೀರ್ಮಾನಿಸಲಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಕ್ಕೆ ಬರುವ ಖಾಸಗಿ ಬಸ್ಸುಗಳಿಗೆ ಮಿನರ್ವಮಿಲ್‌ನ ಹತ್ತಿರ ನಿಲ್ದಾಣವನ್ನು ಮಾಡುವುದಾಗಿ ಹಿಂದೆ